

# ಪ್ಲಾಟಿನಂ ಲೋಹ ಏನೀ ಮೋಹ?

**ಹಳದಿ ಲೋಹ ಚಿನ್ನದ ಮೇಲೆ ಮಹಿಳೆಯರಿಗೆ ಎಲ್ಲಿಲ್ಲದ ವ್ಯಾಮೋಹ. ಇದೀಗ ಚಿನ್ನದ ಜೊತೆಗೆ ಪ್ಲಾಟಿನಂ ಎಂಬ ಬಿಳಿ ಲೋಹದ ಮೇಲೆಯೂ ಮಹಿಳೆಯರಿಗೆ ಮೋಹ ಉಂಟಾಗಿದೆ. ಹಗುರವಾದ, ತರಾವರಿ ವಿನ್ಯಾಸಗಳ ಪ್ಲಾಟಿನಂ ಆಭರಣದ ಮೇಲೆ ಈಗ ಯುವತಿಯರ ಕ್ರೇಜ್ ಹೆಚ್ಚಾಗಿದೆ.**

**■ ಉಮಾ ವೇಣೂರು**

ಫ್ಯಾಷನ್ ಜಗತ್ತಿನಲ್ಲಿ ಟ್ರೆಂಡ್ ಕಾಲಕಾಲಕ್ಕೆ ಬದಲಾಗುತ್ತಲೇ ಇರುತ್ತದೆ. ಹೊನ್ನಿನ ಮೇಲೆ ಎಲ್ಲಿಲ್ಲದ ಮೋಹವಿದ್ದ ಹೆಂಗಳೆಯರು ಈಗ ಆಭರಣದ ವಿವಿಧ ಬಗೆಯತ್ತ ಕಣ್ಣುಹಾಯಿಸಲಾರಂಭಿಸಿದ್ದಾರೆ. ವಿದೇಶಗಳಲ್ಲಿ ಮನೆಮಾತಾಗಿರುವ ಪ್ಲಾಟಿನಂ ಈಗ ನಮ್ಮ ಮಹಿಳೆಯರನ್ನೂ ಸೆಳೆಯತೊಡಗಿದೆ. ಹೀಗಾಗಿ ಯುವತಿಯರ ಚಿತ್ತ ಪ್ಲಾಟಿನಂನ ವೈವಿಧ್ಯಮಯ ವಿನ್ಯಾಸಗಳತ್ತ ಹರಿದಿದೆ.

ಪ್ಲಾಟಿನಂ ಒಡವೆ ಈ ಪರಿ ಮಹಿಳೆಯರನ್ನು ಸೆಳೆಯಲು ಕಾರಣವಾದರೂ ಏನು? ಉತ್ತರ ಇಷ್ಟೆ. ಪ್ಲಾಟಿನಂನ ನೈಸರ್ಗಿಕ ಬಿಳಿ ಬಣ್ಣ ಎಂದಿಗೂ ಮಾಸುವುದಿಲ್ಲ, ಒಡವೆ ಸವೆಯುವುದಿಲ್ಲ. ಜೊತೆಗೆ ಎಂದೆಂದೂ ಬಿಡಿಸಲಾಗದ ಬಾಂಧವ್ಯ, ಪ್ಲಾಟಿನಂ ಶುದ್ಧತೆಯ ಸಂಕೇತ. ಒಂದು ಮೂಲದ ಪ್ರಕಾರ ಪ್ಲಾಟಿನಂ ಚಿನ್ನಕ್ಕಿಂತ 30 ಪಟ್ಟು ಹೆಚ್ಚು ಶುದ್ಧವಾದದ್ದು. ದೀರ್ಘ ಕಾಲ ಬಾಳಿಕೆ ಬರುತ್ತದೆ. ಹೊಸ ಅನುಬಂಧ ಸೃಷ್ಟಿಸಲು ಈಗೀಗ ಪ್ಲಾಟಿನಂ ಒಡವೆಯೇ ಬೇಕು ಎನ್ನುವಷ್ಟು ಜನಪ್ರಿಯ. ಏಕೆಂದರೆ ಈ ಲೋಹ ಪ್ರೀತಿಯ ಸಂಕೇತ, ಅನುಬಂಧದ ಪ್ರತೀಕ ಎಂಬುದು ಮಹಿಳೆಯರಿಗೆ ಮನದಟ್ಟಾಗಿದೆ.

